ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(2)ಹಿ.ಸ.ನಿ.ಮುಂಬಡ್ತಿ-43/2020-21 ದಿನಾಂಕ : 25-11-2020.

**ಜ್ಞಾಪನಾ**

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಬೋಧಕೇತರ ವೃಂದದ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಜ್ಞಾಪನಾ ಸಂಖ್ಯೆ: ಸಿ5[2]ಪ.ಜೇ.ಪ/21/2020-21 ದಿನಾಂಕ: 23-09-2020.

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಬೋಧಕೇತರ ವೃಂದದ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಜೇಷ್ಠತೆ ಹಾಗೂ ಅರ್ಹತೆಯ ಆಧಾರ ಸ್ಥಾನಪನ್ನ ಬಡ್ತಿಯನ್ನು ನೀಡಬೇಕಾಗಿರುವುದರಿಂದ ಜ್ಯೇಷ್ಠತೆ ಹಾಗೂ ಮೀಸಲಾತಿಯ ಮೇರೆಗೆ ಬಡ್ತಿಗಾಗಿ ಅರ್ಹರಿರುವ ಪತ್ರಾಂಕಿತ ಸಹಾಯಕರ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಪಟ್ಟಿಯಲ್ಲಿರುವ ತಮ್ಮ ವ್ಯಾಪ್ತಿಯ ಪತ್ರಾಂಕಿತ ಸಹಾಯಕರುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡ ಬಡ್ತಿಯ ಡೋಸಿಯರ್ ಸಿದ್ದಪಡಿಸಿ ಆದ್ಯತೆಯ ಮೇರೆಗೆ ಕಳುಹಿಸಿಕೊಡುವಂತೆ ಕೋರಿದೆ.

1. 2015-16 ರಿಂದ 2019-20 ನೇ ಸಾಲಿನವರೆಗಿನ ಕಾರ್ಯನಿರ್ವಹಣಾ ವರದಿಗಳನ್ನು **ಪರಿಶೀಲನಾಧಿಕಾರಿಗಳ ಹಾಗೂ ಅಂಗೀಕಾರ ಪ್ರಾಧಿಕಾರಿಗಳ ಷರಾದೊಂದಿಗೆ.**
2. ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಜನರಲ್ ಲಾ ಭಾಗ-1 ಮತ್ತು 2 ಗಳಲ್ಲಿ ಉತ್ತೀರ್ಣರಾದ ಬಗ್ಗೆ ದಾಖಲೆಗಳ ಪ್ರತಿ.
3. ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ಪ್ರಮಾಣ ಪತ್ರ / ವಿನಾಯ್ತಿ ಪ್ರಪತ್ರ.
4. ಅಧಿಕಾರಿಯ ಸೇವಾ ವಿವರಗಳು – ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ
5. ಸಂಬಂಧಿಸಿದ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅಥವಾ ನ್ಯಾಯಾಲಯದ ಪ್ರಕರಣಗಳಾಗಲಿ ಬಾಕಿ ಇರುವ / ಇಲ್ಲದೇ ಇರುವ ಬಗ್ಗೆ ದೃಢೀಕರಣ ಪತ್ರ. (ವಿಚಾರಣೆಗಳು ಬಾಕಿ ಇದ್ದಲ್ಲಿ ಸಿ.ಸಿ.ಎ. ನಿಯಮದಂತೆ ಕರಡು ಆರೋಪ ಪಟ್ಟಿ ಜಾರಿಯಾಗಿರಬೇಕು).
6. **ಒಂದು ವೇಳೆ ಅರ್ಹ ಪ್ರಕರಣಗಳು ಕೈಬಿಟ್ಟಿದಂತಹ ಪಕ್ಷದಲ್ಲಿ ಪರಿಶೀಲಿಸಿಕೊಂಡು ಅರ್ಹ ಪ್ರಕರಣವಾಗಿದ್ದಲ್ಲಿ ನಿಮ್ಮ ಅಭಿಪ್ರಾಯದೊಂದಿಗೆ ಅಂತಹ ಸೂಕ್ತ ಪ್ರಸ್ತಾವನೆಯನ್ನು ಸಹ ಸಲ್ಲಿಸತಕ್ಕದ್ದು**

ಮೇಲ್ಕಂಡ ಮಾಹಿತಿಯನ್ನು/ದಾಖಲೆಗಳನ್ನು ಒಳಗೊಂಡ ಡೋಸಿಯರ್‌ನ್ನು ದಿನಾಂಕ:30-11-2020. ರೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡುವಂತೆ ಕೋರಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

(ಸಿರಿಯಣ್ಣವರ ಲಲಿತ ಚಂದ್ರಶೇಖರ್)
ನಿರ್ದೇಶಕರು[ಆಡಳಿತ][ಹೆ.ಪ್ರ]

ರವರಿಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ಅಗತ್ಯ ಕ್ರಮಕ್ಕಾಗಿ.

2. ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು, ಮೈಸೂರು, ಬೆಂಗಳೂರು, ಕಲಬುರಗಿ ಮತ್ತು ಧಾರವಾಡ ಇವರ ಮುಂದಿನ ಕ್ರಮಕ್ಕಾಗಿ.
3. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ.
4. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ.
5. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ.
6. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ.
7. ಸಂಬಂಧಿಸಿದ ಅಧಿಕಾರಿಗಳಿಗೆ,
8. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(2)ಹಿ.ಸ.ನಿ.ಮುಂಬಡ್ತಿ-43/2020-21 ದಿನಾಂಕ : 25-11-2020.

## ಅನುಬಂಧ

ಪತ್ರಾಂಕಿತ ಸಹಾಯಕರ ವೃಂದದಿಂದ ಹಿರಿಯ ಸಹಾಯಕ ನಿರ್ದೇಶಕರು(ಬೋಧಕೇತರ) ವೃಂದಕ್ಕೆ ಬಡ್ತಿಯನ್ನು ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾದ ಅಧಿಕಾರಿಗಳ ವಿವರ.

| ಕ್ರ. ಸಂ. | ಅಧಿಕಾರಿಯ ಹೆಸರು ಮತ್ತು ಕಛೇರಿ ವಿಳಾಸ | ರಾಜ್ಯ ಮಟ್ಟದ ಪತ್ರಾಂಕಿತ ಸಹಾಯಕರ ಜ್ಯೇಷ್ಠತಾ ಪಟ್ಟಿಯಲ್ಲಿ ಜ್ಯೇಷ್ಠತಾ ಸಂಖ್ಯೆ | ಪ್ರವರ್ಗ |
|---|---|---|---|
| 01. | ಎಸ್.ಎನ್. ವೆಂಕೋಬರಾವ್, ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ | 79 | ಇತರೆ |
| 02. | ಸಿ.ಜಿ.ಗಿರೀಶ್, ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ. | 80 | ಇತರೆ |
| 03. | ಎಂ.ಶಶಿಧರನ್, ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ. | 81 | ಪರಿಶಿಷ್ಟ ಜಾತಿ |
| 04 | ವಿರೂಪಾಕ್ಷಯ್ಯ, ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ | 86 | ಇತರೆ. |
| 05. | ಭೀಮಪ್ಪ ಗಿರಿಯಪ್ಪ ದಾಸರ, ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ ಜಿಲ್ಲೆ | 87 | ಪ.ಜಾತಿ |

(ಸಿರಿಯಣ್ಣವರ ಲಲಿತ ಚಂದ್ರಶೇಖರ್)
ನಿರ್ದೇಶಕರು(ಆಡಳಿತ)[ಹೆ.ಪ್ರ]